ಅಲ್ಲಿಯವರೆಗೂ ತನ್ನ ಪಾಡಿಗೆ ತಾನಿರುವ ಅವರೆ, ರಾಗಿ ಪೈರು ಖಾಲಿಯಾಗುತ್ತಲೇ ದಷ್ಟಪುಷ್ಟವಾಗಿ ಬೆಳೆಯತೊಡಗುತ್ತದೆ. ಮುಂದಿನ ಎರಡು ಮೂರು ವಾರಗಳಲ್ಲಿ ಕಾಯಿಗಳಿಂದ ತುಂಬಿಕೊಳ್ಳುತ್ತದೆ.

ಬಸವನಬೆಟ್ಟದಲ್ಲಿ ಬೆಳೆಯುವುದು ದೇಸಿ ತಳಿಯದ್ದಾಗಿದ್ದು, ಇತರೆಡೆ ಬೆಳೆಯುವ ಅವರೆಗಿಂತ ಹೆಚ್ಚಿನ ಘಮಲು ಹೊಂದಿದೆ. ಹೀಗಾಗಿಯೇ ಇದಕ್ಕೆ ‘ಸೊನೆ ಅವರೆ’ ಎನ್ನಲಾಗುತ್ತದೆ. ಕಟಾವು ಮಾಡಿದ ಅವರೆಯನ್ನು ಬೊಗಸೆಯಲ್ಲಿ ಹಿಡಿದುಕೊಂಡರೆ, ಸಾಕಷ್ಟು ಹೊತ್ತು ಅದರ ಪರಿಮಳ ನಮ್ಮ ಸುತ್ತ ಸುತ್ತುತ್ತಲೇ ಇರುತ್ತದೆ. ‘ಸೊನೆ ಹೆಚ್ಚಿರುವ ಕಾರಣದಿಂದ, ಬೇರೆ ಕಡೆಯ ಅವರೆಗಿಂತ ನಮ್ಮ ಬೆಟ್ಟದ ಅವರೆಗೆ ಹೆಚ್ಚು ಬೇಡಿಕೆ’ ಎನ್ನುತ್ತಾರೆ, ರೈತ ಮಹಿಳೆ ಶಾಂತಮ್ಮ.

ಅವರೆಯಲ್ಲಿ ಹೈಬ್ರಿಡ್ ತಳಿಗಳು ಮಾರುಕಟ್ಟೆಗೆ ಬಂದಿವೆಯಾದರೂ ಬಸವನಬೆಟ್ಟದಲ್ಲಿ ಅವುಗಳ ಹಾವಳಿ ಕಡಿಮೆ. ಕೊಯ್ಲು ಮುಗಿದ ಬಳಿಕ ರೈತರು ಒಂದಷ್ಟು ಅವರೆ ಬೀಜಗಳನ್ನು ಚೆನ್ನಾಗಿ ಒಣಗಿಸಿ, ಮುಂದಿನ ಹಂಗಾಮಿಗೆ ಬಿತ್ತನೆಗೆಂದು ಎತ್ತಿಟ್ಟುಕೊಳ್ಳುತ್ತಾರೆ. ಕೆಲವರು ಈ ಬೀಜಗಳನ್ನು ಸೇರಿಗೆ ಇನ್ನೂರು ರೂಪಾಯಿಗಳಂತೆ ಇತರೆ ರೈತರಿಗೆ ಮಾರುತ್ತಾರೆ. ‘ಮೊದಲೆಲ್ಲ ಹೆಚ್ಚು ಒಳಸುರಿಗಳಿಲ್ಲದೇ ಸೊನೆ ಅವರೆ ಬೆಳೆಯುತ್ತಿದ್ದ ರೈತರು, ಈಗ ಕೀಟಬಾಧೆಗೆ ರಾಸಾಯನಿಕ ಸಿಂಪಡಣೆ ಶುರು ಮಾಡಿದ್ದಾರೆ, ಬೇವಿನ ಎಲೆ, ಬೂದಿ, ಕೆಮ್ಮಣ್ಣು, ಸೋರೆಕಾಯಿಗಳಲ್ಲಿ ಬೀಜ ಸಂರಕ್ಷಣೆ ಮಾಡಲಾಗುತ್ತಿತ್ತು. ಈಗ ಆ ಜಾಗವನ್ನು ರಾಸಾಯನಿಕ ಪುಡಿ ಆಕ್ರಮಿಸಿದೆ’ ಎಂದು ವಿಷಾದಿಸುವ ಸಾವಯವ ಕೃಷಿಕ ಬಿ. ಸೋಮೇಶ, ಸೊನೆ ಅವರೆ ಮನ್ನಣೆಯನ್ನು ಹಾಗೆಯೇ ಉಳಿಸಿಕೊಳ್ಳಬೇಕೆಂದರೆ ರಸವಿಷಗಳ ಬಳಕೆಯನ್ನು ರೈತರು ತ್ಯಜಿಸಿ, ಜೈವಿಕ ವಿಧಾನಗಳತ್ತ ಗಮನ ಹರಿಸಬೇಕು ಎಂದು ಅಭಿಪ್ರಾಯಪಡುತ್ತಾರೆ.

ಬಸವನಬೆಟ್ಟದ ಅವರೆಗೆ ಪ್ರಮುಖ ಮಾರುಕಟ್ಟೆ ಎಂದರೆ, ಹತ್ತು ಕಿ.ಮೀ. ದೂರದ ಹಲಗೂರು. ಬೆಳಿಗ್ಗೆ ಕಟಾವು ಮಾಡುವ ಅವರೆಯನ್ನು ರೈತರು ಹಾಗೂ ಸಣ್ಣ ರೈತರಿಂದಲೇ ಉತ್ಪನ್ನ ಖರೀದಿಸುವ ಮಾರಾಟಗಾರರು, ಹಲಗೂರಿಗೆ ಮೂಟೆ ಸಾಗಿಸಿ ತರುತ್ತಾರೆ. ಇಲ್ಲಿಗೆ ಬರುತ್ತಲೇ ಕೆಲ ಸಮಯದಲ್ಲೇ ಅವರೆ ಬಿಕರಿಯಾಗುತ್ತದೆ. ‘ಕನಿಷ್ಠವೆಂದರೂ ಕಿಲೋಗೆ ಅರವತ್ತು ರೂಪಾಯಿ ದರ ಸಿಗುತ್ತದೆ. ಬೇಡಿಕೆ ಹೆಚ್ಚಿದ್ದಾಗ ನೂರು ರೂಪಾಯಿಯೂ ಆದೀತು. ಸಂಕ್ರಾಂತಿ ಆಸುಪಾಸು ದಿನಕ್ಕೆ ಒಂದು ಕ್ವಿಂಟಲ್ ಕೊಯ್ಲು ಮಾಡಿದ ರೈತರು ನಮ್ಮಲ್ಲಿದ್ದಾರೆ’ ಎಂದು ಯುವ ಕೃಷಿಕ ಸುನೀಲ್ ಕುಮಾರ್ ಹೇಳುತ್ತಾರೆ. ಬೆಂಗಳೂರಿನಲ್ಲಿ ಕೆ.ಜಿ.ಗೆ ಇನ್ನೂರು ರೂಪಾಯಿಯಂತೆ ಮಾರಾಟವಾಗುವ ಬಸವನಬೆಟ್ಟದ ಅವರೆಗೆ ಹೆಚ್ಚು ಪ್ರಚಾರವೇ ಬೇಕಿಲ್ಲ; ಅಷ್ಟೊಂದು ಬೇಡಿಕೆ ಇದೆ ಎಂಬುದು ಅವರ ಅಭಿಮತ.

ಸಮಯಕ್ಕೆ ಸರಿಯಾಗಿ ಕಾಯಿ ಹೊತ್ತು ನಿಲ್ಲುವ ಸೊನೆ ಅವರೆಗೆ ಹವಾಮಾನ ವೈಪರೀತ್ಯದ ಬಿಕ್ಕಟ್ಟು ಎದುರಾಗಿದೆ. ವಾಸ್ತವವಾಗಿ ಸಂಕ್ರಾಂತಿ ಬಳಿಕವೇ ಕೊಯ್ಲು ಶುರುವಾಗಬೇಕು. ಆದರೆ ಏಳೆಂಟು ವರ್ಷಗಳಿಂದ ಕಟಾವು ಏರುಪೇರಾಗಿದೆ ಎಂದು ರೈತರು ಹೇಳುತ್ತಾರೆ. ‘ಜನವರಿಯಿಂದ ಶುರುವಾಗುತ್ತಿದ್ದ ಅವರೆ ಮಾರಾಟವು, ಯುಗಾದಿ ಹಬ್ಬದವರೆಗೆ ದಿನನಿತ್ಯ ನಡೆಯುತ್ತಿತ್ತು. ಆದರೆ ಈಗ ಸಂಕ್ರಾಂತಿ ಹಬ್ಬದ ಎರಡು ವಾರಗಳಲ್ಲೇ ಅವರೆ ಖಾಲಿಯಾಗುತ್ತಿದೆ. ಯಾಕೆ ಅಂತ ನಮಗೂ ಗೊತ್ತಾಗುತ್ತಿಲ್ಲ’ ಎಂದು ಹಲಗೂರಿನ ತರಕಾರಿ ವ್ಯಾಪಾರಿ ಕೃಷ್ಣ ಗೊಂದಲದ ದನಿಯಲ್ಲಿ ನುಡಿಯುತ್ತಾರೆ.


ರಾಗಿ ಕೊಯ್ಲಿನ ಬಳಿಕ ಸಿಗುವ ಅವರೆ ಬೆಳೆ

## ‘ಮಂಡ್ಯದ ಕಾಶ್ಮೀರ’

ಮಂಡ್ಯ ಜಿಲ್ಲೆ ಮಳವಳ್ಳಿ ತಾಲ್ಲೂಕಿನ ಬಸವನಬೆಟ್ಟ ಪ್ರಾಕೃತಿಕ ರಮ್ಯತಾಣ. ಹಲಗೂರು ಹೋಬಳಿಗೆ ಸೇರಿರುವ ಈ ತಾಣವು ‘ಹೆಬ್ಬೆಟ್ಟ’ ಅಂತಲೇ ಪ್ರಖ್ಯಾತ. ಸುಮಾರು ಹತ್ತು ಸಾವಿರ ಹೆಕ್ಟೇರ್ ವಿಸ್ತಾರದಲ್ಲಿ ಹರಡಿರುವ ಕಾವೇರಿ ವನ್ಯಜೀವಿ ಧಾಮದ ವ್ಯಾಪ್ತಿಗೆ ಈ ಬೆಟ್ಟವು ಸೇರಿದ್ದು, ಸಮುದ್ರ ಮಟ್ಟದಿಂದ ಸುಮಾರು ಮೂರು ಸಾವಿರ ಅಡಿ ಎತ್ತರದಲ್ಲಿದೆ. ಈ ಬೆಟ್ಟದ ಬಗ್ಗೆ ಕೆಲವೇ ಕೆಲವು ಚಾರಣಿಗರು ಅಥವಾ ನಿಸರ್ಗಪ್ರೇಮಿಗಳಿಗೆ ಗೊತ್ತಿದೆ! ಪ್ರಕೃತಿಪ್ರಿಯರ ಗುಂಪುಗಳಲ್ಲಿ ಬಸವನಬೆಟ್ಟವನ್ನು ‘ಮಂಡ್ಯದ ಕಾಶ್ಮೀರ’ ಎಂದೇ ಬಣ್ಣಿಸಲಾಗುತ್ತದೆ.

ಮಳವಳ್ಳಿಯಿಂದ 20 ಕಿ.ಮೀ. ದೂರದ ಬಸವನಬೆಟ್ಟಕ್ಕೆ ಪ್ರವಾಸ ಕೈಗೊಂಡರೆ, ಪಕ್ಕದಲ್ಲೇ ಇರುವ ಶಿವನಸಮುದ್ರ ಹಾಗೂ ಮುತ್ತತ್ತಿಯನ್ನು ‘ಮಸ್ಟ್ ವಿಸಿಟ್’ ಪಟ್ಟಿಯಲ್ಲಿ ಸೇರಿಸಿಕೊಳ್ಳಬಹುದು.


ಬಸವನಬೆಟ್ಟದಲ್ಲಿ ಬೆಳೆಯುವ ಅವರೆ ಹಲಗೂರು ಮಾರುಕಟ್ಟೆಯಲ್ಲಿ

### ಆಹ್ಲಾದಕರ ಅನುಭವ

ಸೊನೆ ಅವರೆಯ ಪರಿಮಳಕ್ಕೆ ಮಾರುಹೋಗುವ ಪ್ರವಾಸಿಗರಿಗೆ ಬಸವನಬೆಟ್ಟ ಮತ್ತೊಂದು ಆಹ್ಲಾದಕರ ಅನುಭವ ಕೊಡುತ್ತದೆ. ಸಮುದ್ರ ಮಟ್ಟದಿಂದ 3000 ಅಡಿ ಎತ್ತರದಲ್ಲಿರುವ ‘ಹೆಬ್ಬೆಟ್ಟ’ ತಲುಪಲು ನಿಸರ್ಗ ರಮಣೀಯ ಹಿನ್ನೆಲೆಯಲ್ಲಿ ಅಂಕುಡೊಂಕಾದ ರಸ್ತೆಯಿದೆ. ಕುರುಚಲು ಕಾಡಿನಿಂದ ತುಂಬಿಕೊಂಡಿರುವ ಈ ಬೆಟ್ಟದಲ್ಲಿ ಚಿರತೆ, ಕರಡಿ ಹಾಗೂ ತರಹೇವಾರಿ ಪಕ್ಷಿಗಳು ಕಂಡುಬರುತ್ತವೆ. ಬೆಂಗಳೂರಿನಿಂದ ಒಂದೂವರೆ ತಾಸು ಅವಧಿಯಲ್ಲಿ ಬಂದು ಸೇರಬಹುದಾದ ಬಸವನಬೆಟ್ಟದಲ್ಲಿ ಕಾಲು, ಅರ್ಧ, ಒಂದು ಎಕರೆ ಜಮೀನು ಖರೀದಿಸಿ, ಮನೆ ಕಟ್ಟಿಕೊಂಡು ವಾರಾಂತ್ಯ ಕಳೆಯುವ ಪರಿಪಾಟ ಹೆಚ್ಚಾಗುತ್ತಿದೆ. ಹೀಗಾಗಿ ಬೆಟ್ಟವೇರುವಾಗ ದಿಢೀರನೇ ಅಚ್ಚುಕಟ್ಟಾದ ಚೆಂದದ ಮನೆಯೂ, ರೆಸಾರ್ಟಿನಂತೆ ಭಾಸವಾಗುವ ಕಟ್ಟಡಗಳೂ ಕಂಡರೆ ಅಚ್ಚರಿಪಡಬೇಕಿಲ್ಲ.

ಕಾವೇರಿ ನದಿಗೆ ಸಮೀಪದಲ್ಲಿರುವ ಬಸವನಬೆಟ್ಟದಲ್ಲಿ ಚೋಳರ ಕಾಲದಲ್ಲಿ ನಿರ್ಮಾಣವಾಗಿದ್ದು ಎನ್ನಲಾದ ಬಸವೇಶ್ವರ ದೇಗುಲವಿದೆ. ಪ್ರತಿ ವರ್ಷ ಇಲ್ಲಿ ವಿಶೇಷ ಜಾತ್ರೆ ನಡೆಯುತ್ತದೆ. ಬೆಟ್ಟದ ಉತ್ತರ ಭಾಗಕ್ಕೆ ಕಡಿದಾದ ಅಂಚು ಇದ್ದು, ಅಲ್ಲಿಂದ ಕಾಣುವ ನೋಟವಂತೂ ಮನಮೋಹಕ.

ಚಾರಣಿಗರಿಗೆ ‘ಹೆಬ್ಬೆಟ್ಟ’ ಅತೀವ ಖುಷಿ ಕೊಡುವ ತಾಣ. ಪರ್ವತ ಏರುವ ಹಾದಿ ಅಷ್ಟೇನೂ ಕಠಿಣವಲ್ಲ. ಅನಾಯಾಸವಾಗಿ ಬೆಟ್ಟವೇರಿ ಮೇಲಕ್ಕೆ ಹೋದಂತೆಲ್ಲ ಮೈಸೋಕುವ ತಂಗಾಳಿ ಹಾಗೂ ಪ್ರಶಾಂತ ವಾತಾವರಣ ಎಂಥವರನ್ನೂ ಮೂಕವಿಸ್ಮಿತಗೊಳಿಸುತ್ತದೆ. ದೂರದಲ್ಲಿ ಕಾಣುವ ಮೋಡಗಳು ನಮ್ಮತ್ತಲೇ ನಿಧಾನವಾಗಿ ಸಾಗಿ ಬಂದು ಆವರಿಸಿಕೊಂಡಾಗ ರೋಮಾಂಚನ! ಅನತಿ ಕ್ಷಣಗಳಲ್ಲೇ ಆಗಸ ಸ್ವಚ್ಛವಾಗಿ, ಸೂರ್ಯನ ಕಿರಣಗಳು ನೆಲವನ್ನು ಸ್ಪರ್ಶಿಸುವಾಗ, ದೂರದಲ್ಲಿ ರಾಮನಗರದ ಬೆಟ್ಟಗಳು ಥಳ ಥಳ ಹೊಳೆದು ಪ್ರಕೃತಿಪ್ರಿಯರನ್ನು ಮಂತ್ರಮುಗ್ಧವಾಗಿಸುತ್ತವೆ. ■